ಧನೆಯಿಂದ ಆಗತಕ್ಕದ್ದು ಬಹುಕಾಲಾನಂತರ ನಡಿಯುತಕ್ಕದ್ದಾಗಿರುತ್ತೆ. ಇಂಥಾ ಕೆಲಸಗಳು ಯಾವತ್ತು ಸರಿಯಾಗಿ ಜಾರೀಗೆ ತರಬೇಕಾಗಿದ್ದರೆ ಇನ್ಸ್ಪೆಕ್ಟರುಗಳು ಸ್ಥಳದ ವಿದ್ಯಮಾನಗಳನ್ನೆಲ್ಲಾ ಚೆನ್ನಾಗಿ ತಿಳಿದು ಇಂಥಾ ಸಂದರ್ಭಗಳಲ್ಲೆಲ್ಲಾ ಸರಿಯಾದ ಮಾರ್ಗವನ್ನು ತೋರಿಸುವಂಥಾ ಸ್ಥಳದ ಅಧಿಕಾರಿಗಳ ಆಧೀನ ಮತ್ತು ತಾಬೇದಾರಾಗಿ ಇರಬೇಕು. ಆದ್ದರಿಂದ ಆಗಾಗ್ಯೆ ಸಂಚಾರ ಮಾಡಿ ಜನಗಳನ್ನು ಮಂದಟ್ಟು ಮಾಡಿಕೊಳ್ಳತಕ್ಕಂಥಾ ಇತರ ಇಲಾಖೆಗಳಲ್ಲಿ ಡಿಸ್ಟ್ರಿಕ್ಟು ಆಡಳಿತಕ್ಕೆ ಇರುವ ಅಸಿಸ್ಟೆಂಟರುಗಳ ಹಾಗೆ ಬೇರೆ ಡಿಸ್ಟ್ರಿಕ್ಟು ಸ್ಯಾನಿಟೆರಿ ಆಫಿಸರವರು ಇಲ್ಲದಿರೋಣದರಿಂದಲೂ ಮತ್ತು ಈ ಕೆಲಸಕ್ಕಾಗಿ ಬೇರೆ ಸಿಬ್ಬಂದಿಯನ್ನು ಇಟ್ಟುಕೊಳ್ಳಲು ಬೋರ್ಡಿನವರಿಗೆ ಚೈತನ್ಯವಿಲ್ಲವಾದ್ದರಿಂದ ಈ ಸ್ಯಾನಿಟೆರಿ ಮತ್ತು ಅಸಿಸ್ಟೆಂಟ್ ಸ್ಯಾನಿಟೆರಿ ಇನ್ಸ್ಪೆಕ್ಟರುಗಳನ್ನು ಟೆಕ್ನಿಕಲ್ ಇಲಾಖೆಗೆ ಆಧೀನಪಡಿಸುವದರಿಂದ ಯಾವ ಪ್ರಯೋಜನವೂ ಕಂಡುಬರುವದಿಲ್ಲ. ಅಲ್ಲದೆ ಈ ಇಲಾಖೆಯವರ ಅಭಿಪ್ರಾಯ ಮತ್ತು ಬೋಧನೆ ಮೇರೆಗೆ ಈಗಲೂ ಕೂಡ ಸ್ಥಳೀಯ ವಿದ್ಯಮಾನಗಳಿಗನುಸಾರವಾಗಿ ಕೈಲಾದ ಮಟ್ಟಿಗೂ ನಡಿಯಬಹುದಾಗಿರುತ್ತೆಂತ ಬೋರ್ಡಿನವರು ಅಭಿಪ್ರಾಯ ಪಡುತ್ತಾರೆ.

27. ಈ ಕೆಳಗೆ ಕಂಡ ತಾಲ್ಲೂಕು ಬೋರ್ಡು ಪ್ರೊಸೀಡಿಂಗ್ಸುಗಳು ಓದಿ ರೆಕಾರ್ಡು ಮಾಡಲಾಯಿತು.

	ತಾಲ್ಲೂಕು.		ತಾರೀಖು.				ತಾಲ್ಲೂಕು.		ತಾರೀಖು.		
1.	ಚಿಂತಾಮಣಿ	...	14	9	08	7.	ಚಿಂತಾಮಣಿ	...	20	10	08
2.	ಗೋರೀಬಿದನೂರು	...	ಡಿಟೋ			8.	ಮಾಲೂರು	...	29	10	08
3.	ಬಾಗೇಪಲ್ಲಿ	...	15	9	08	9.	ಬಾಗೆಪಲ್ಲಿ	...	19	10	08
4.	ಗುಡಿಬಂಡೆ	...	28	9	08	10.	ಮುಳಬಾಗಲ್	...	ಡಿಟೋ		
5.	ಶಿಡ್ಲಘಟ್ಟ	...	9	10	08	11.	ಬೌರಿಂಗಪೇಟೆ	...	21	11	08
6.	ಚಿಕ್ಕಬಳ್ಳಾಪುರ	...	14	10	08						

28. 1908ನೆ ನವಂಬರ್ ತಿಂಗಳಲ್ಲಿ ಸ್ಯಾಂಕ್ಷ್ನ್ ಆದ ಕೆಲಸಗಳ ಪಟ್ಟಿಯನ್ನು ಓದಿ ಮಂಜೂರ್ಮಾಡಲಾಯಿತು.

29. 1909ನೆ ಫೆಬ್ರವರಿ ಮಾಹೆಯ 27ನೆ ತಾರೀಖು ಶನಿವಾರ ದಿವಸ ಮುಂದಿನ ಮೀಟಿಂಗ್ ನಡಿಯುತ್ತೆಂದು ತೀರ್ಮಾನಿಸಲಾಯಿತು.

ಎಸ್. ಶ್ಯಾಮಣ್ಣ,
ಛಾರ್ ಪ್ರೆಸಿಡೆಂಟ್.

ಮೈಸೂರು ಡಿಸ್ಟ್ರಿಕ್ಟು.

ಸ್ರ 1909ನೆ ಇಸವಿ ಜನವರಿ 30 ರಲ್ಲು.

ಸ್ರ 1909ನೆ ಏಪ್ರಿಲ್ ಮಾಹೆ 2ನೆ ತಾರೀಖು ಲಾಗಾಯಿತು 3ನೆ ತಾರೀಖು ಪರಿಯಿಗೆ ನಂಜನಗೂಡಿನಲ್ಲಿ ಶ್ರೀ ಶ್ರೀಕಂಠೇಶ್ವರ ಸ್ವಾಮಿಯವರ ರಥೋತ್ಸವ ನಡೆಯುವ ಕಾಲದಲ್ಲಿ, ಸದರೀ ಸ್ಥಳದಲ್ಲಿ ಒಂದು ದನಗಳ ಪ್ರದರ್ಶನ ನಡಿಯುತ್ತೆ.

II. ಪ್ರದರ್ಶನದಲ್ಲಿ ಉತ್ತಮ ದನಗಳಿಗೆ ಈ ಕೆಳಗೆ ಕಂಡಂತೆ ಬಹುಮಾನಗಳು ದೊರೆಯುತ್ತೆ.

A ಕ್ಲಾಸ್. ವ್ಯವಸಾಯದ ಎತ್ತುಗಳು.	1ನೆ ಬಹುಮಾನ	...	20	A ಕ್ಲಾಸ್. ಒಟ್ಟು ರೂಪಾಯಿ	55
	2ನೆ ,,	...	15		
	3ನೆ ,,	...	10		
	4ನೆ ,,	...	10		
B ಕ್ಲಾಸ್. ಬೀಜದ ಗೂಳಿಗಳು.	1ನೆ ಬಹುಮಾನ	...	15	B ಕ್ಲಾಸ್. ಒಟ್ಟು ರೂಪಾಯಿ	25
	2ನೆ ,,	...	10		
C ಕ್ಲಾಸ್. ಹಸುಗಳು.	ಪ್ರತಿಯೊಂದಕ್ಕೂ 5 ರೂಪಾಯಿನಂತೆ ನಾಲ್ಕು ಬಹುಮಾನ.			C ಕ್ಲಾಸ್. ಒಟ್ಟು ರೂಪಾಯಿ	20
D ಕ್ಲಾಸ್. ಒಳ್ಳೆ ಕರುಗಳನ್ನು ಕೊಡುವ ಹಸು.	1ನೆ ಬಹುಮಾನ	...	10	D ಕ್ಲಾಸ್. ಒಟ್ಟು ರೂಪಾಯಿ	10
				ಒಟ್ಟು ಜಮ್ಲಾ ರೂ.	110

III. ಬಹುಮಾನವನ್ನು ಕೊಡಲು ಒಂದು ಕಮಿಟಿಯನ್ನು ಏರ್ಪಡಿಸುತ್ತೆ. ಸದರೀ ಕಮಿಟಿಯ ತೀರ್ಮಾನವು ಆಖೈರಾಗಿರುತ್ತೆ. ಕಮಿಟಿಯವರ ತೀರ್ಮಾನಕ್ಕೆ ಕಾರಣ ಕೇಳಿಕೂಡದು.

IV. ಸ್ಥಳದಲ್ಲಿ ಹುಲ್ಲು ದೊರೆಯುಲು ಏರ್ಪಾಡು ಇಡುತ್ತೆ. ಆದರೆ ದನಗಳ ಸ್ವಂತಗಾರರೂ ತಮ್ಮ ಜಾಗರೂಕತೆಯಲ್ಲಿ ಇರುವದು ಅನುಕೂಲ.

V. ಪ್ರದರ್ಶನಕ್ಕೆ ದನಗಳನ್ನು ತರಲು ಇಷ್ಟವುಳ್ಳವರು ನಂಜನಗೂಡು ತಾಲ್ಲೂಕು ಆಮಿಲರವರಿಗೆ ಜಾತ್ರೆ ಮೊದಲಾಗುವದಕ್ಕೆ ಕೊನೇಪಕ್ಷ 2 ದಿವಸ ಮೊದಲಾಗಿ ಬರೆದುಕೊಳ್ಳಬೇಕು.

VI. ಪ್ರದರ್ಶನ ನಡೆಯುವ ಸ್ಥಳವು ದನಗಳು ಸೇರಲು ಅನುಕೂಲವಾದ್ದಾಗಿದೆ. ಮೈಸೂರು ಮತ್ತು ಬ್ರಿಟಿಷ್ ಕೀಮೆಯಿಂದ ಅನೇಕ ಜನಗಳು ಸೇರುವದ್ದರಿಂದ, ದನಗಳ ವ್ಯಾಪಾರ ಚೆನ್ನಾಗಿ ನಡೆಯಬಹುದು.

ಇಸ್ತಿಹಾರ್ನಾಮೆ.

ತಾರೀಖು 27ನೆ ಜನವರಿ 1909.

ಎಡತೊರೆ ತಾಲ್ಲೂಕು ಕಸಬಾ ಹೋಬಳಿಗೆ ಸೇರಿದ ಜೋಡಿ ಚಾವಲಾಪುರ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿ ಗೋಸ್ಕರವಾಗಿ ಸದರಿ ಜೋಡಿ ಚಾವಲಾಪುರ ಗ್ರಾಮದಲ್ಲಿ 1909ನೆ ಏಪ್ರೆಲ್ ಮಾಹೆ 12ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ. ಮೇಲ್ಕಂಡ ತಾರೀಖಿನಲ್ಲಿ ಹರಾಜು ಅಜ್ಜರ್ಿ ಆದಲ್ಲಿ ಮೂರನೇ ದಿವಸ ಎಡತೊರೆ ತಾಲ್ಲೂಕು ಕಛೇರಿಯಲ್ಲಿ ಹರಾಜು ನಡಿಸಲ್ಪಡುತ್ತೆ.

ಹೆಚ್ಚು ತಪ್ಸೀಲಿಗೆ ಸ್ಯ1909ನೆ ಇಸವಿ ಫೆಬ್ರವರಿ 11ನೆ ಮಂಗ್ಳಾರ್ ಮೈಸೂರು ಗೆಜೆಟ್ಟಿನ 2ನೆ ಭಾಗದ 81ನೆ ಪೇಜು ನೋಡತಕ್ಕದ್ದು.

ತಾರೀಖು 27ನೆ ಜನವರಿ 1909.

ಎಡತೊರೆ ತಾಲ್ಲೂಕು ಚುಂಚನಕಟ್ಟೆ ಹೋಬಳಿಗೆ ಸೇರಿದ ಸರ್ವಮಾನ್ಯ ದಿಡ್ಡಹಳ್ಳಿ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಎಡತೊರೆ ತಾಲ್ಲೂಕು ಕಛೇರಿಯಲ್ಲಿ 1909ನೆ ಏಪ್ರೆಲ್ 5ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹೆಚ್ಚು ತಪ್ಸೀಲಿಗೆ ಸ್ಯ1909ನೆ ಇಸವಿ ಫೆಬ್ರವರಿ 11ನೆ ಮಂಗ್ಳಾರ್ ಮೈಸೂರು ಗೆಜೆಟ್ಟಿನ 2ನೆ ಭಾಗದ 82ನೆ ಪೇಜು ನೋಡತಕ್ಕದ್ದು.

ತಾರೀಖು 29ನೆ ಜನವರಿ 1909.

ಹುಣಸೂರು ತಾಲ್ಲೂಕು ಪೆರಿಯಪಟ್ಟಣದ ಹೋಬಳಿಗೆ ಸೇರಿದ ಜೋಡಿ ಗುಡ್ಡೇನಹಳ್ಳಿ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಸದರಿ ಜೋಡಿ ಗುಡ್ಡೇನಹಳ್ಳಿ ಗ್ರಾಮದಲ್ಲಿ 1909ನೆ ಏಪ್ರೆಲ್ ಮಾಹೆ 8ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹೆಚ್ಚು ತಪ್ಸೀಲು ಬಗ್ಗೆ ಸ್ಯ 1909ನೆ ಇಸವಿ ಫೆಬ್ರವರಿ 11ನೆ ಮಂಗ್ಳಾರ್ ಮೈಸೂರು ಗೆಜೆಟ್ಟಿನ 2ನೆ ಭಾಗದ 80ನೆ ಪೇಜು ನೋಡತಕ್ಕದ್ದು.

ಎಂ. ಕಾಂತರಾಜ ಅರಸ್,
ಡೆಪ್ಯುಟಿ ಕಮಿಷನರ್.

1908ನೆ ಇಸವಿ ಡಿಸೆಂಬರ್ 26ನೆ ತಾರೀಖು ಶನಿವಾರ ಪ್ರಾತಃಕಾಲ 8 ಘಂಟೆಯಲ್ಲಿ ರಂಗಾಚಾರ್ಲು ಯವರ ಟೌನ್‌ಹೌರಿಯಲ್ ಹಾಲಿನಲ್ಲಿ ನಡೆದ ಮೈಸೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲರುಗಳ ಆರ್ಡಿನೆರಿ ಮೀಟಿಂಗಿನ ಪ್ರೊಸೀಡಿಂಗ್ಸು.

ಹಾಜರು.

1. ಮಿ|| ಎಂ. ಜಿ. ಕೃಷ್ಣಸ್ವಾಮಿರಾಯರವರು (ವೈಸ್ ಪ್ರೆಸಿಡೆಂಟ್).
2. ,, ಬಿ. ಸುಬ್ಬರಾಯರವರು (ಮೈಸೂರು ಡಿವಿಜ್ ಎಗ್ಜಿಕ್ಯೂಟಿವ್ ಇಂಜನಿಯರ್‌ರವರು).
3. ,, ಸೈದ್ ಯಾಕೂಬ್ ಸಾಹೇಬರವರು, (ಮೈಸೂರು ತಾಲ್ಲೂಕು ಅಮಲ್ದಾರ್).
4. ,, ಎಂ. ಸಿ. ರಂಗೈಯ್ಯಂಗಾರ್‌ರವರು.
5. ,, ಎ. ಸುಬ್ಬಣ್ಣನವರು
6. ,, ಕೆ. ಚಂದ್ರಶೇಖರೈಯ್ಯನವರು.
7. ,, ಅಂಬಳೆ ಅಂಣಯ್ಯ ಪಂಡಿತರವರು.
8. ,, ಎಸ್. ಶ್ರೀಕಂಠೈಯ್ಯನವರು.
9. ,, ಎಂ. ನರಸುಹ್ಮಸ್ವಾಮಿಗಳವರು.
10. ,, ಎಂ. ಕೃಷ್ಣಪ್ಪಾಜಿ ಅರಸಿನವರು.
11. ,, ತಿರುವೆಂಗಡ ಮೊದಲಿಯಾರ್‌ರವರು.
12. ,, ಸೈದ್ ಮೊಹದ್ದೀ ಸಾಹೇಬರವರು.
13. ,, ಮಾದಪ್ಪನವರು.
14. ,, ಹಸೇನಲ್ಲಿಬೇಗ್ ಸಾಹೇಬರವರು.
15. ,, ರಹಿಮತ್ತುಲ್ಲಾ ಅಹಮ್ಮದ್ ಸೇಠರವರು.

ಗೈರ್ ಹಾಜರು.

1. ಮಿ|| ಎಂ. ಕಾಂತರಾಜೆ ಅರಸಿನವರು (ಪ್ರೆಸಿಡೆಂಟ್).
2. ,, ಎಂ. ವೆಂಕಟಕೃಷ್ಣಯ್ಯನವರು.
3. ,, ಅನಂತರಾಜೈಯ್ಯನವರು.